MADAM SPEAKER.—Motion moved. I will put it to vote. The question is :

"That leave be granted to introduce the Karnataka Stamp (Amendment) Bill, 1976."

(The motion was adopted and the leave was granted.)

SRI N. HUTCHAMASHTI GOWDA.—I introduce :

"The Karnataka Stamp (Amendment) Bill, 1976."

MADAM SPEAKER.—The Bill is introduced. **

KARNATAKA APPROPRIATION (No. 3) BILL, 1976.

Motion to Consider

SRI M. Y. GHORPADE(Minister for Finance and Housing).—I move:

"That the Karnataka Appropriation (No. 3) Bill, 1976 be taken into consideration."

MADAM SPEAKER.—Motion moved.

"That the Karnataka appropriation (No. 3) Bill, 1976 be taken into consideration."

ಶ್ರೀ ಕೊಣಂದೂರು ಲಿಂಗಪ್ಪ.—ಮಾನ್ಯ ಆಧ್ಯಕ್ಷರೇ, ನಾನು ಮತ್ತು ಮಾನ್ಯ ಕೃಷ್ಣಪ್ಪನವರೂ ನಿನ್ನೆ ದಿವಸ ೩.೨೦ರ ಕೆಳಗೆ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದೇವೆ.

ಅಧ್ಯಕ್ಷರು.—ಬಿಲ್ ಪರ್ಯಾಲೋಚನೆಗೆ ಬಂದಿರುವಾಗ ಮಾನ್ಯ ಸದಸ್ಯರು ಏನು ಹೇಳುತ್ತಿದ್ದಾರೆ ?

ಶ್ರೀ ಎಚ್. ಟಿ. ಕೃಷ್ಣಪ್ಪ.—೧೫೦ ಜನರನ್ನು ಈ ದಿವಸ ಕೆಲಸದಿಂದ ತೆಗೆದುಹಾಕಿಬಿಟ್ಟಿದ್ದಾರೆ.

ಅಧ್ಯಕ್ಷರು.—ಕಾಲಿಂಗ್ ಅಟೆನ್‌ಷನ್ ಆದ ತಕ್ಷಣ ಅದನ್ನು ಕೇಳಬೇಕು. ಇದಕ್ಕೆ ನಿಗದಿಯಾದ ವೇಳೆ ಇದೆ ಅಲ್ಲವೇ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಯಾವ ಸಮಯದಲ್ಲಾದರೂ ಇದಕ್ಕೆ ಅವಕಾಶ ಕೊಡಲು ತಮಗೆ ಅಧಿಕಾರ ಇದೆ.

† ಶ್ರೀ ಟಿ. ಆರ್. ಶಾಮಣ್ಣ (ಕೋಚೆ).—ಸನ್ಮಾನ್ಯ ಸಭಾಧ್ಯಕ್ಷರೇ; ಈಗಾಗಲೇ ಇದರ ಬಗ್ಗೆ ಅನೇಕ ದಿನಗಳ ಕಾಲ ಬೇರೆ ಬೇರೆ ಬೇಡಿಕೆಗಳ ಮೇರೆ ಚರ್ಚೆಯಾಗಿರುವುದರಿಂದ ಮತ್ತು ಆ ಬೇಡಿಕೆಗಳಿಗೆ ಈಗಾಗಲೇ ಸಭೆ ಒಪ್ಪಿಗೆ ಕೊಟ್ಟಿರುವುದರಿಂದ ಇದರ ಬಗ್ಗೆ ಹೆಚ್ಚು ವಾತನ್ನಾಡತಕ್ಕಂಥ ಅವಶ್ಯಕತೆ ಇಲ್ಲ ಎಂಬ ಅರಿವು ನನಗೆ ಇದೆ. ಆದರೂ ಕೆಲವು ವಿಚಾರ ಗಳನ್ನು ಈ ನಿಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಇಟ್ಟಿರತಕ್ಕಂಥ ಬೇಡಿಕೆಗಳ ಪೈಕಿ ಈಗ ಯಾವ ಹೆಚ್ಚುವರಿ ಹಣವನ್ನು ಒದಗಿಸಿವ್ಯಾರೆ, ಈ ಹೆಚ್ಚುವರಿ ಹಣವನ್ನು ಒದಗಿಸಿ ರತಕ್ಕಂಥಾವರಲ್ಲಿ ಸಿಂಹಪಾಲು ಸರ್ಕಾರಿ ನೌಕರರಿಗೆ ಕೊಡತಕ್ಕ ಡಿಯರ್‌ನೆಸ್ ಅಲೋಯನ್ಸ್ ಈಗ ಪೇ ಕಮಿಷನ್‌ನಿಂದ ಬರಬೇಕಾದಂತ ಶಿಪಾರಸ್ಸಿನ ಮೇರೆ ಸರ್ಕಾರ ತೆಗೆದುಕೊಳ್ಳುವಂತ ಕಾರ್ಯಕ್ರಮಗಳ ಬಗ್ಗೆ ಉಪಯೋಗಿಸಿರುವುದರಿಂದ, ಈ ಅಭಿವೃದ್ಧಿ ಕಾರ್ಯಗಳಿಗೆ ಮತ್ತು ಇತರ ಜನೋಪಯುಕ್ತ ಕಾರ್ಯಗಳಿಗೆ ಈ ವರ್ಷದ ಆಯವ್ಯದಲ್ಲಿ ಹೆಚ್ಚಿನ ಪ್ರಯೋಜನವಾಗು

** Bill appended as Annexure to this of leave.

ವುದಿಲ್ಲವೆಂದು ಸ್ಪಷ್ಟಪಡಿಸಲು ನಾನು ಇಷ್ಟಪಡುತ್ತೇನೆ. ಇದರ ಜೊತೆಗೆ ಈ ಸಂದರ್ಭದಲ್ಲಿ ಹೇಳಬೇಕಾದರೆ ಸರ್ಕಾರ ಸಂಪನ್ಮೂಲಗಳನ್ನು ದೊರಕಿಸುವ ಮುಖಾಂತರ ನಾನಾ ರೀತಿಯಲ್ಲಿ ಹೆಚ್ಚಿಗೆ ಹಣವನ್ನು ವಸೂಲು ಮಾಡುವುದರಿಂದ, ನಾನು ಹೇಳುವುದು ಇಷ್ಟೆ ಆದಷ್ಟು ಈ ಹಣವನ್ನು ಹೆಚ್ಚಿನ ರೀತಿಯಲ್ಲಿ ವಸೂಲು ಮಾಡಿ ಖರ್ಚಿನ ಭಾಗದಲ್ಲಿ ಸಾಕಾದಷ್ಟು ಮಿತವ್ಯಯವನ್ನು ಉಪಯೋಗಿಸಿಕೊಂಡು ಸಂಪನ್ಮೂಲಗಳ ಪ್ರಯೋಜನ ಏನಿದೆಯೋ ಇದು ಸಾಕಾದಷ್ಟು ಸಾಮಾನ್ಯ ಜನಗಳಿಗೆ ಒದಗಿಸುವ ರೀತಿಯಲ್ಲಿ ಹೆಚ್ಚಿಗೆ ಉಪಯೋಗವಾಗುವ ರೀತಿಯಲ್ಲಿ ಸರ್ಕಾರ ತಕ್ಕ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಸಲಹೆಯನ್ನು ನೀಡುತ್ತೇನೆ. ಮೊದಲನೆಯದಾಗಿ ಸ್ಟೇಟ್ ಲೆಜಿಸ್ಲೇಟರ್ ಮತ್ತು ಎಲಕ್ಷನ್ ಬಗ್ಗೆ ಸುಮಾರು 3 ಕೋಟಿ 69 ಲಕ್ಷ ರೂಪಾಯಿನ ಬೇಡಿಕೆ ಇದೆ. ಈ ಬೇಡಿಕೆಯಲ್ಲಿ ನಮಗೆ ಇರತಕ್ಕಂಥ ವರಮಾನದಲ್ಲಿ ಇದು ಹೆಚ್ಚಿನ ಬೇಡಿಕೆಯೆಂದು ನನಗೆ ಕಾಣಿಸುತ್ತದೆ. ನಾನಾದರೂ ಹೇಳುತ್ತೇನೆ ಈ ಅಸಂಬ್ಲಿ ಎಲೆಕ್ಷನ್ ಮತ್ತು ಪಾರ್ಲಿಮೆಂಟ್ ಎಲೆಕ್ಷನ್ ಯಾವಾಗ ಆಗುತ್ತದೆಯೋ ನನಗೆ ಗೊತ್ತಿಲ್ಲ. ಈ ಬೇಡಿಕೆಯನ್ನು ಯಾವುದಕ್ಕೆ ಕೇಳಿದ್ದಾರೆಯೋ ಗೊತ್ತಿಲ್ಲ. ಆದರೂ ಕೂಡ ನನ್ನ ಸಲಹೆಯಾದರೂ ಇಷ್ಟೆ ಸಾಧಾರಣವಾಗಿ ಈಗಿನ ಎಲೆಕ್ಷನ್‌ನಲ್ಲಿ ಪದ್ಧತಿ ಪ್ರಕಾರ ಓಬ್ಬ ಅಸೆಂಬ್ಲಿ ಕ್ಯಾಂಡಿಡೇಟ್ ಸುಮಾರು 20 ಸಾವಿರದಿಂದ ಒಂದು ಲಕ್ಷದವರೆಗೆ ಖರ್ಚು ಮಾಡಬೇಕಾಗುತ್ತದೆ. ಪಾರ್ಲಿಮೆಂಟ್ ಮೆಂಬರ್ ಒಂದು ಲಕ್ಷದಿಂದ 5 ಲಕ್ಷದವರೆಗೆ ಹೆಚ್ಚಿಗೆ ಖರ್ಚು ಮಾಡುವ ಪರಿಸ್ಥಿತಿ ಇದೆ. ಇದು ಕೇಂದ್ರಕ್ಕೆ ಸಂಬಂಧಪಟ್ಟದ್ದು. ಆದರೂ ಕೂಡ ಕೇಂದ್ರಕ್ಕೆ ಶಿಪಾರಸು ಮಾಡಿ ಎಲೆಕ್ಷನ್ ಖರ್ಚನ್ನು ಸರ್ಕಾರದವರೇ ವಹಿಸಿಕೊಂಡು ಯಾರು ಎಲೆಕ್ಷನ್‌ಗೆ ನಿಂತುಕೊಳ್ಳುತ್ತಾರೋ ಅವರಿಂದ ಅವರ ಆರ್ಥಿಕ ಪರಿಸ್ಥಿತಿ ಪ್ರಕಾರ ಒಂದು ಮಟ್ಟದಲ್ಲಿ ಈ ಹಣವನ್ನು ತೆಗೆದುಕೊಂಡು ಪೂರ್ತಿ ಖರ್ಚನ್ನು ಸರ್ಕಾರ ವಹಿಸಿಕೊಂಡರೆ ಅದರಿಂದ ಈ ಕರಪ್ಷನ್ ಸ್ವಲ್ಪ ಕಡಿಮೆಯಾಗಿ ಈ ಎಲಕ್ಷನ್‌ನಲ್ಲಿ ಸಾಮಾನ್ಯ ಜನರೂ ನಿಂತುಕೊಳ್ಳುವುದಕ್ಕೆ ಅವಕಾಶವಾಗುತ್ತದೆಂದು ಸಲಹೆ ಮಾಡುತ್ತೇನೆ.

ರ್ಯಾಂಡ್ ರೆವೆನ್ಯೂ ಡಿಪಾರ್ಟ್‌ಮೆಂಟ್‌ನವರು ಒಂದಾನೊಂದು ಕಾಲದಲ್ಲಿ ಹೆಚ್ಚಿನ ಸಂಪಾದನೆಯನ್ನು ಸರ್ಕಾರಕ್ಕೆ ಒದಗಿಸಿ ಕೊಡುವ ಕಾಲ ಇತ್ತು. ಈಗ ರ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟಿನಿಂದ ಮತ್ತು ಡಿಸ್ಟ್ರಿಕ್ಟ್ ಅಥಾರಿಟಿ ಎಂದು ಏನು ಹೇಳುತ್ತೇನೆ ಇವೆರಡರಿಂದ ಕೂಡ ಲೆಕ್ಕ ಹಾಕಿದರೆ ಸುಮಾರು 15 ಕೋಟಿ ರೂಪಾಯಿ ಮತ್ತು ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಟಿವ್‌ನಿಂದ ಸುಮಾರು 4 1/2 ಕೋಟಿ ರೂಪಾಯಿಗಳು ಇವೆರಡನ್ನೂ ಸೇರಿಸಿದರೆ ಸುಮಾರು 20 ಕೋಟಿಯಷ್ಟು ಆಗುತ್ತದೆ. ರ್ಯಾಂಡ್ ರೆವೆನ್ಯೂನಲ್ಲಿ ನನ್ನ ಲೆಕ್ಕದ ಪ್ರಕಾರ ಬರತಕ್ಕ ವರಮಾನಕ್ಕಿಂತ ಖರ್ಚೇ ಜಾಸ್ತಿಯಾಗಿದೆಯೆಂದು ಕಾಣಿಸುತ್ತದೆ, ಇದರ ಬಗ್ಗೆ ನಾವು ಯೋಚನೆ ಮಾಡಬೇಕಾದಂತ ಪರಿಸ್ಥಿತಿ ಇದೆ, ಏಕೆಂದರೆ ರ್ಯಾಂಡ್ ರೆವೆನ್ಯೂನಲ್ಲಿ ಬರತಕ್ಕ ವರಮಾನಕ್ಕಿಂತ ಖರ್ಚು ಹೆಚ್ಚಾಗಿ ವರಮಾನ ಕಡಿಮೆ ಬಂದರೆ ಹಣ ಸೋರಿ ಹೋಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ, ಮತ್ತು ಸ್ಟ್ಯಾಂಪ್ ಮತ್ತು ರಿಜಿಸ್ಟ್ರೇಷನ್‌ನಿಂದ ವರಮಾನ ಬರುತ್ತದೆ, ಬಂದಿರತಕ್ಕದ್ದರಲ್ಲಿ ಖರ್ಚಿಕೂಡ ಕಡಿಮೆಯಾಗುತ್ತದೆ. ಇದರ ಬಗ್ಗೆ ಅನೇಕ ಸಾರಿ ಹೇಳಿದರೂ ಕೂಡ ಸ್ಟ್ಯಾಂಪ್ ಬಗ್ಗೆ, ಮತ್ತು ರಿಜಿಸ್ಟ್ರೇಷನ್ ಬಗ್ಗೆ ಇರುವ ತೊಡಕುಗಳನ್ನು ಗಳನ್ನು ತಪ್ಪಿಸಬೇಕು ಎಂದು ಹೇಳುತ್ತೇನೆ. ಅನೇಕ ಸಾರಿ ಹೇಳಿದರೂ ಕೂಡ ಟ್ಯಾಕ್ಸಸ್ ಆಫ್ ವೆಹಿಕರ್ ಮತ್ತು ಲೋಕರ್ ಬಾಡೀಸ್‌ಗೆ ಕೊಡಬೇಕಾದಂತ ಕಾಂಪನ್‌ಸೇಷನ್ ಅನೇಕ ಸಂದರ್ಭಗಳಲ್ಲಿ ಶಿಪಾರಸ್ಸುಗಳನ್ನು ಮಾಡಿಸಿದರೂ ಕೂಡ ಯಾವತ್ತೂ ಕೂಡ ಇದರ ಬಗ್ಗೆ ಗಮನಕ್ಕೆ ತೆಗೆದುಕೊಂಡು ಲೋಕರ್ ಬಾಡೀಸ್‌ಗೆ ನ್ಯಾಯವಾಗಿ ಏನು ಸಲ್ಲಬೇಕೋ, ಹಾಗೆ ಸಲ್ಲಬೇಕಾಗಿರುವುದನ್ನು ಒದಗಿಸುತ್ತಾನಿಲ್ಲ. ಹೆಚ್ಚಿಗೆ ವರಮಾನವನ್ನು ಈ ಮೋಟಾರ್ ವೆಹಿಕರ್ ಟ್ಯಾಕ್ಸ್‌ನಿಂದ ಪಡೆಯುತ್ತಿದ್ದರೂ ಕೂಡ ಲೋಕರ್ ಬಾಡಿಸ್‌ಗೆ 15-20ವರ್ಷಗಳಿಂದ ಕಾಂಪನ್‌ಸೇಷನ್ ಏನುಗೊತ್ತು ಮಾಡಿದೆಯೋ ಅದನ್ನು ಕೊಡುವ ಬಗ್ಗೆ ಸರ್ಕಾರ ಅಸ್ಥೆ ವಹಿಸಿಲ್ಲ. ಇದರ ಬಗ್ಗೆ ನಿಧಾನ ಮಾಡುತ್ತಿರುವುದು ಶೋಚನೀಯವಾದ ವಿಚಾರವೆಂದು ಹೇಳುತ್ತೇನೆ, ಪಬ್ಲಿಕ್ ವರ್ಕ್ ಮತ್ತು ಬಿಲ್ಡಿಂಗ್ ಬಗ್ಗೆ ಇಷ್ಟನ್ನು ಮಾತ್ರ ಹೇಳಬೇಕಾಗಿದೆ. ಅಲ್ಲಿ ಕೆಲಸಗಳು ಬೇಗ ಬೇಗ ನಡೆದು ಉತ್ತಮವಾದ ಕೆಲಸಗಳು ನಡೆಯಬೇಕಾಗಿದೆ. ಇಲ್ಲಿ ಆಗಿರತಕ್ಕ ದುರುಪಯೋಗಗಳ ಬಗ್ಗೆ ವಿವರಣೆ

ಯನ್ನು ಕೊಟ್ಟಿದ್ದಾರೆ. ನಮ್ಮ ಬೇಡಿಕೆ 24+8, ಒಟ್ಟು 32ಕೋಟಿ ರೂಪಾಯಿಗಳನ್ನು ಕೇಳಿದ್ದಾರೆ. ಇಲ್ಲಿ ಕೆಲಸಗಳು ಸಮರ್ಪಕವಾದ ರೀತಿಯಲ್ಲಿ ನಡೆಯುವಂತೆ ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಹೆಚ್ಚಿಗೆ ಹಣ ಒದಗಿಸಿದ್ದೂ ವ್ಯರ್ಥವಾಗುತ್ತದೆ. ಈ ಬೇಡಿಕೆಗಳಲ್ಲಿ ಅತಿಮುಖ್ಯವಾಗಿ ಕೆಲಸಗಳು ಬೇಗ ಬೇಗ ನಡೆಯುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕು. ಕೆಲಸದ ಗುಣಮಟ್ಟದ ಬಗ್ಗೆ ಕಾರ್ಯಕ್ರಮವನ್ನು ತೆಗೆದುಕೊಂಡು ಇದರಲ್ಲಿರುವ ತೊಡಕುಗಳನ್ನೂ ಕೂಡ ತಪ್ಪಿಸುವುದಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದ ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ.

ಇನ್ನು ಈ ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಸುಮಾರು 5 ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಬೇಡಿಕೆಯಲ್ಲಿ ಕೇಳಿದ್ದಾರೆ. ಬೆಂಗಳೂರು ಡೆವಲಪ್‌ಮೆಂಟ್ ಅಥಾರಿಟಿಗೆ ಒದಗಿಸತಕ್ಕ 5 ಕೋಟಿ ರೂಪಾಯಿಗಳನ್ನು ಯಾವುಯಾವುದಕ್ಕೆ, ಯಾವ ಯಾವ ಬಾಬಿನ ಮೇಲೆ ಒದಗಿಸುತ್ತಾರೆ ಎನ್ನುತಕ್ಕಂಥ ವಿವರಗಳು ಹೆಚ್ಚಾಗಿ ಗೊತ್ತಾಗಿಲ್ಲ. ಆದರೂ ಕೂಡ ನನ್ನ ಸಲಹೆಯಾದರೂ ಇಷ್ಟೆ ಬೆಂಗಳೂರು ಡೆವಲಪ್‌ಮೆಂಟ್ ಪ್ಲಾನಿಂಗ್ ಅತಾರಿಟಿ ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್‌ಬೋರ್ಡ್ ಅನೇಕ ಬೇರೆಬೇರೆ ಡಿಪಾರ್ಟ್‌ಮೆಂಟ್‌ಗಳು ಸೇರಿ ಅತಾರಿಟಿಯಾಗಿದೆ. ಈ ಲ್ಯಾಂಡ್ ಡೆವಲಪ್‌ಮೆಂಟ್ ಅತಾರಿಟಿ ಬಗ್ಗೆ ಹೇಳಬೇಕಾದುದು ಇಷ್ಟೆ ಈ ಲ್ಯಾಂಡ್ ಸೀಲಿಂಗ್‌ನಲ್ಲಿ ಬೇಕಾದಷ್ಟು ಜಮೀನು ಸರ್ಕಾರದ ಅಧೀನಕ್ಕೆ ಬರುತ್ತಿದೆ. ಇದನ್ನು ತೆಗೆದುಕೊಳ್ಳುವವರಿಗೆ ಬಹಳ ಎಚ್ಚರಿಕೆಯಿಂದ ಈ ಲ್ಯಾಂಡ್ ಸೀಲಿಂಗ್ ಆಕ್ಟನ್ನು ಅಪ್ಲೈ ಮಾಡಿ ಸಾಧ್ಯವಾದಷ್ಟು ಜಮೀನನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿರುತ್ತದೆ. ಈ ಜಾಗವನ್ನು ತೆಗೆದುಕೊಂಡು ಸಾಧ್ಯವಾದಷ್ಟು ಮಟ್ಟಿಗೆ ಬಡವರಿಗೆ ಹಂಚಿಕೆಗೆ ಕಾರ್ಯಕ್ರಮವನ್ನು ಸರ್ಕಾರದವರು ತೆಗೆದುಕೊಳ್ಳಬೇಕಾಗುತ್ತದೆ.

ಹೌಸಿಂಗ್ ಕೂಡ ಅರ್ಥಮಂತ್ರಿಗಳ ಅಧಿಕಾರದಲ್ಲಿರುತ್ತದೆ. ನನಗೆ ಗೊತ್ತಾದಹಾಗೆ ಸುಮಾರು ಒಂದು ಸಾವಿರ ಎಕರೆಗಿಂತ ಹೆಚ್ಚಿಗೆ ಜಾಗ ಬೆಂಗಳೂರಿನ ಸುತ್ತಮುತ್ತ ಸಿಗುತ್ತದೆ. ಆದ್ದರಿಂದ ಈ ಜಾಗವನ್ನು ತೆಗೆದುಕೊಂಡು ಅಲ್ಲಿ ಸಾಕಷ್ಟು ಮನೆಗಳನ್ನು ಕಟ್ಟಿಸಬೇಕು ಎಂದು ನಾನು ಸಲಹೆ ಮಾಡುತ್ತೇನೆ.

ಆಹಾರ ಸರಬರಾಯಿ ವಿಷಯದಲ್ಲಿ ಹೇಳುವುದಾದರೆ ಅನೇಕ ಗೋಡನ್‌ಗಳಲ್ಲಿ ಹೋದ ಸಾರಿ ತೆಗೆದಿಟ್ಟ ಆಹಾರಧಾನ್ಯಗಳು ಹಾಗೆಯೇ ಕೊಳೆಯುತ್ತಿವೆ. ಕೆಟ್ಟುಹೋಗುತ್ತಿದೆ ಎಂದು ಕೇಳಿದ್ದೇನೆ. ಆದರ ಬಗ್ಗೆ ಇಲಾಖೆಯವರು ಸ್ವಲ್ಪ ಗಮನ ಹರಿಸಿ ಆಹಾರಪದಾರ್ಥಗಳು ಕೆಡದಹಾಗೆ ನೋಡಿಕೊಂಡು ಜನಗಳಿಗೆ ಒಳ್ಳೆಯ ಆಹಾರ ಸಿಗುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೆನೆ.

ಬೀಸಿಗೆ ಬಂದಾಗಿನಿಂದ ಬೆಂಗಳೂರು ಡೈರಿಯವರು ಕೊಡತಕ್ಕ ಹಾಲು ನೀರಾಗುವುದಕ್ಕೆ ಮತ್ತು ವಾಸನೆ ಬರುವುದಕ್ಕೆ ಪ್ರಾರಂಭವಾಗಿದೆ. ಇದರ ಬಗ್ಗೆ ಸ್ವಲ್ಪ ಗಮನ ಹರಿಸಿ ತಕ್ಕ ಕಾರ್ಯಕ್ರಮ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಕೊನೆಯದಾಗಿ ಎರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರೋಡ್‌ಗಳು ಮತ್ತು ಬ್ರಿಡ್ಜಸ್‌ಗಳನ್ನು ಅಭಿವೃದ್ಧಿಪಡಿಸುವ ಬಗ್ಗೆ ಹೇಳುವುದಾದರೆ ಅನೇಕ ರಸ್ತೆಗಳು ಪಿ. ಡಬ್ಲ್ಯು. ಡಿ, ಇಲಾಖೆಯವರು ನೋಡಿಕೊಳ್ಳಬೇಕೊ, ಫಾರೆಸ್ಟ್ ಡಿಪಾರ್ಟ್‌ಮೆಂಟಿನವರು ನೋಡಿಕೊಳ್ಳಬೇಕೋ ಯಾರು ನೋಡಿಕೊಳ್ಳಬೇಕು ಎಂಬ ಕಾರ್ಯಕ್ರಮ ತೆಗೆದುಕೊಂಡಿಲ್ಲ. ರಸ್ತೆಗಳಲ್ಲಿ ಮರಗಳನ್ನು ಯಾರು ಬೆಳೆಸಬೇಕು ಎಂಬುದರ ಬಗ್ಗೆ ಯೋಚನೆ ಮಾಡಿ ರಸ್ತೆಗಳನ್ನು ಮತ್ತು ಮರಗಳನ್ನು ಉಳಿಸುವುದು ಮತ್ತು ಬೆಳೆಸುವುದರ ಬಗ್ಗೆ ಸೂಕ್ತ ಕಾರ್ಯಕ್ರಮ ತೆಗೆದು ತೆಗೆದುಕೊಳ್ಳಬೇಕು.

ಲೋಕರ್ ಬಾಡಿಗಳಿಗೆ ಕೊಡತಕ್ಕ ಗ್ರಾಂಟ್, ಕಾಂಪನ್‌ಸೇಷನ್ ಹೆಚ್ಚಿಗೆ ಕೊಡಿ ಎಂದು ಹೇಳಿ ಈ ವರ್ಷ ಇಟ್ಟಿರತಕ್ಕ ಹಣ ಸದ್ವಿನಿಯೋಗವಾಗಿ ಖರ್ಚಾಗುವಂತೆ ಸರ್ಕಾರ ಕಾರ್ಯಕ್ರಮ ತೆಗೆದುಕೊಳ್ಳಲಿ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ವಿ. ಎನ್. ಪಾಟೀಲ್ (ಹುಮ್ನಾಬಾದ್).—ಮಾನ್ಯ ಅಧ್ಯಕ್ಷರೇ. ಈ ಅಪ್ರೊಪ್ರಿಯೇಷನ್ ಬಿಲ್ ಮೇಲೆ ಮಾತನಾಡುತ್ತಾ ಎರಡು ವಿಷಯಗಳನ್ನು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ. ನಮ್ಮಲ್ಲಿ ಒಂದು ಅನಿಶ್ಚಿತ ವಾತಾವರಣ ಉದ್ಭವಿಸಿದೆ. ನಾವು ಭೂಮಿಯ ಮೇಲೆದ್ದೇವೆಯೋ. ಆಕಾಶದ ಮೇಲೆದ್ದೇವೆಯೋ ಎನ್ನುವುದು ಗೊತ್ತಿಲ್ಲ. ಕಾನೂನಿನಲ್ಲಿ ಡಿಫೆಕ್ಟ್ ಇರುವುದರಿಂದ Correct interpretation of law ಆಗುತ್ತಾ ಇಲ್ಲ. ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಸೆಕ್ಷನ್ 4ರ ಬಗ್ಗೆ ಇಂಟರ್‌ಪ್ರಿಟೇಷನ್‌ಗೆ ಹೈಕೋರ್ಟಿನಿಂದ ಬಂದಿದೆ. ಜೆನೆಂಟ್ 1-3-74ಕ್ಕೆ ಭೂಮಿ ಮೇಲೆ ಇಲ್ಲದಿದ್ದರೆ ಅದು ಸರ್ಕಾರದಲ್ಲಿ ವೆಸ್ಟ್ ಆಗುವುದಿಲ್ಲ. 1-3-74ರಂದು ಯಾವ ಲ್ಯಾಂಡ್ ಜೆನೆಂಟ್ ಸ್ವಾಧೀನದಲ್ಲಿರಲಿಲ್ಲ ಅದರ ಬಗ್ಗೆ ಟ್ರಿಬ್ಯುನಲ್ಸ್ ತೀರ್ಮಾನ ಕೊಡಬಾರದು. ಅಪ್ಲಿಕೇಷನ್ ಎಂಟರ್‌ಟೈನ್ ಮಾಡಬಾರದು. ಆ ಲ್ಯಾಂಡ್ ಸರ್ಕಾರದಲ್ಲಿ ವೆಸ್ಟ್ ಆಗುವುದಿಲ್ಲ. The landlord is deemed to be in possession of the land ಎನ್ನುವ ತರಹ ಇಂಟರ್ ಪ್ರಿಟೇಷನ್ ಬಂದಿದೆ. ಇದುವರೆಗೆ ಅಂತಹ ಲ್ಯಾಂಡ್ ಲ್ಯಾಂಡ್‌ಲಾರ್ಡ್ಸ್‌ಗೆ ಹೋಗಬಹುದು, It is vested in the Government ಎಂದು ಹೇಳಿ ಅದನ್ನು ಹಂಚಬಹುದಾಗಿತ್ತು. ಆದರೆ ಹೈಕೋರ್ಟ್ ಡಿಸಿಷನ್‌ನಿಂದ ಈಗ ಮೋಡ ಕವಿದಂತಾಗಿದೆ. ಆದುದರಿಂದ ಇದರ ಬಗ್ಗೆ ಒಂದು ಅಮೆಂಡ್‌ಮೆಂಟ್ ತರಬೇಕಾಗುತ್ತದೆ. ಇಂಥ ನ್ಯೂನತೆಗಳು ಡ್ರಾಫ್ಟಿಂಗ್‌ನಲ್ಲಿ ಇದ್ದುದಕ್ಕೆ ಹೈಕೋರ್ಟ್ ಇದರ ಬಗ್ಗೆ ಬೇರೆ ಇಂಟರ್‌ಪ್ರಿಟೇಷನ್ ಕೊಡುವುದರಿಂದ ಹೆಚ್ಚು ಅನ್ಯಾಯವಾಗುತ್ತದೆ. ಇನ್ನೊಂದು ರಿಟ್ ಪಿಟಿಷನ್ ಹೈಕೋರ್ಟಿಗೆ ಹಾಕುತ್ತಿದ್ದಾರೆ ಮಾನ್ಯ ಹಣಕಾಸಿನ ಸಚಿವರು ಇದರ ಬಗ್ಗೆ ಗಮನ ಕೊಡಬೇಕು. ಯಾವುದೊ ಒಂದು ಚೆಕ್ಕಿಕರ್ ಪಾಯಿಂಟ್‌ನಲ್ಲಿ ಟ್ರಿಬ್ಯುನಲ್ಸ್ ಮಾಡಿದ್ದು ಜೆನೆಂಟಿಗೆ ವಿರುದ್ಧವಾಗಿದ್ದರೆ ಯಾರ ವಶದಲ್ಲಿ ಭೂಮಿ ಇದೆ. ಅಂಥ ಜೆನೆಂಟ್ ಹೈಕೋರ್ಟಿನಲ್ಲಿ ರಿಟ್ ಹಾಕಬೇಕಾದರೆ ಕನಿಷ್ಠ 400-500ರೂಪಾಯಿ ಖರ್ಚಾಗುತ್ತದೆ. ಹಿಂದೆ ಹೈದರಾಬಾದ್ ಸ್ಟೇಟಿನಲ್ಲಿ ಕೆಲವು ಪ್ರಾಪರ್ಟೀಸ್ ಡಿಸ್ಪೋಸ್ ಮಾಡಿದ್ದರು. ಅಂಥವರಿಗೆ ಡೆಪ್ಯುಟಿ ಕಮಿಷನರ್ he is dispossed of the property ಎಂದು ಸರ್ಟಿಫಿಕೇಟ್ ಕೊಡುತ್ತಿದ್ದರು. ಇಂಥ ಸರ್ಟಿಫಿಕೇಟ್ ತಂದಾಗ ಕೆ ಸಾವಿರ ರೂಪಾಯಿ ಕೋರ್ಟ್ ಫೀ ವಿನಾಯಿತಿ ಸಿಗುತ್ತಿತ್ತು. ಆ ತರಹ ಎಗ್ಸಂಪ್ಷನ್ ಜೆನೆಂಟ್ಸ್‌ಗೆ ಇಲ್ಲಿಯೂ ಕೊಡಬೇಕು ಡೆಪ್ಯುಟಿ ಕಮಿಷನರ್, ಅಸಿಸ್ಟೆಂಟ್ ಕಮಿಷನರ್ ಅಥವಾ ಯಾವುದಾದರೂ ಕಾಂಪಿಟೇಷನ್ ಅಥಾರಿಟಿ ಜೆನೆಂಟ್ ಪೊಸಿಷನ್ ಬಗ್ಗೆ ಸರ್ಟಿಫಿಕೇಟ್ ಇಷ್ಯೂ ಮಾಡಿದರೆ ಆಗ ಅಂಥವರಿಗೆ ಕೋರ್ಟ್ ಫೀ ವಿನಾಯಿತಿ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ. ವೆಸ್ಟೆಡ್ ಇಂಟರೆಸ್ಟ್ ತನ್ನ ಹತ್ತಿರ ಇದ್ದ ಪಾಪರ್ಟಿ ವಾಪಸ್ ಕೊಡಬೇಕಾದರೆ ಬಹಳ ತೊಂದರೆಯಾಗುತ್ತಿದೆ. ಕ್ಲಾಸ್ ಕಾನ್‌ಫ್ಲಿಟ್ ಬರುತ್ತದೆ. ಅವನು ತನ್ನ ಇನ್‌ಫ್ಲುಯನ್ಸ್ ಉಪಯೋಗ ಮಾಡಿ ಎರಡು ವರ್ಷದವರೆಗೆ ರಿಟ್‌ಪಿಟಿಷನ್ ಪೆಂಡಿಂಗ್ ಇಟ್ಟುಕೊಳ್ಳುವಂತೆ ಮಾಡುತ್ತಾನೆ. ಲ್ಯಾಂಡ್ ರಿಫಾರ್ಮ್ಸ್ ಕೇಸಿಗೆ ರಿಟ್ ಪಿಟಿಷನ್ ಬೇಗನೆ ಡಿಸ್ಪೋಸ್ ಮಾಡಬೇಕು, ಈ ಬಗ್ಗೆ ಕಟ್ಟುನಿಟ್ಟಾಗಿ ನಿಯಮ ಬದಲಾವಣೆ ಮಾಡಬೇಕು. ಇಷ್ಟು ಪಿರಿಯೆಡ್‌ಗಿಂತ ಹೆಚ್ಚು ಸಮಯ ತೆಗೆದುಕೊಳ್ಳಬಾರದು ಎಂದು ಕಟ್ಟುನಿಟ್ಟಾಗಿ ಅಮೆಂಡ್‌ಮೆಂಟ್ ತರಬೇಕು. ಹಾಗೆ ಮಾಡುವುದರಿಂದ ಜನರಿಗೆ ಸಹಾಯವಾಗುತ್ತದೆ. ಹೈಕೋರ್ಟಿನಲ್ಲಿ ಅಂಥವರಿಗೆ ಸ್ಟ್ಯಾಂಪ್ ಡ್ಯೂಟಿ ಎಗ್ಸೆಂಪ್ಷನ್ ಕೊಡಬೇಕು. ಮೊದಲು Unauthorised Occupationals ಇದ್ದವರಿಗೆ ಲ್ಯಾಂಡ್ ರೆಗುಲರೈಸ್ ಮಾಡುತ್ತೇವೆಂದು ಕಾಯಿದೆ ಸರ್ಕಾರದವರು ತಂದಿದ್ದರು. Unauthorised occupations ಹೆಚ್ಚಾಗುತ್ತದೆ ಎಂದು ಕಸ್ಸೆಷನ್ ಕೊಟ್ಟಿದ್ದನ್ನು ಪತ್ತಾ ಮಾಡಿದ್ದಾರೆ. ಬೀದರ್ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿ Economically backward, Socially backward ಜನರ ಹತ್ತಿರ ಇದ್ದ ಎಂಡು ಮೂರು ಎಕರೆ ಜಮೀನನ್ನು ಅನ್‌ಆಥರೈಸ್ಡ್ ಆಕ್ಯುಪೇಷನ್ ಎಂದು ಹೇಳಿ ಅವರನ್ನು ಆ ಭೂಮಿಯಿಂದ ಎವಿಕ್ಟ್ ಮಾಡುತ್ತಿದ್ದಾರೆ, ಬೀದರ್‌ನಲ್ಲಿ ಗೌರ್ನಮೆಂಟ್ ಲ್ಯಾಂಡ್ ಆಕ್ಯುಪೈ ಮಾಡಿರುವವರು 75 ಪರ್ಸೆಂಟ್ ಸೋಷಿಯರ್ ಬ್ಯಾಕ್ ವರ್ಡ್‌ಜನರು ಅನುಕೂಲಸ್ಥರು ಅಧಿಕಾರವರ್ಗಕ್ಕೆ ಲಂಚ ಕೊಟ್ಟು ರೆಗ್ಯುಲರೈಸ್ ಮಾಡಿಕೊಂಡಿದ್ದಾರೆ ಅಧಿಕಾರವರ್ಗಕ್ಕೆ ಯಾರು ಲಂಚ ಕೊಡಲಿಲ್ಲ ಅವರ ಲ್ಯಾಂಡ್ಸ್ ಇನ್ನೂ ರೆಗ್ಯುಲರೈಸ್ ಆಗಿಲ್ಲ. ಸಿರಿವಂತರ ಹತ್ತಿರ 40-50 ಎಕರೆ

ಜಪ್ತಾನಿರುತ್ತದೆ 10 ಎಕರೆ 15 ಎಕರೆ ಲ್ಯಾಂಡ್ ಅನ್‌ಆಥರೈಸ್ಡ್ ಆಗಿ 1968ರ ಕಾಯಿದೆ ಬೆನಿಫಿಟ್ ತೆಗೆದುಕೊಂಡು ರೆಗುಲರೈಸ್ ಮಾಡಿಸಿಕೊಂಡಿದ್ದಾರೆ. 1968ರಿಂದ 1974ರವರೆಗೆ ಸರ್ವೆ ಡಿಪಾರ್ಟ್‌ಮೆಂಟಿನವರು ಸರ್ವೆ ಮಾಡಿದರೂ ಕೂಡ ಇನ್ನೂ ರೆಗುಲರೈಸ್ ಮಾಡಿಲ್ಲ. ನಮ್ಮ ಭಾಗದಲ್ಲಿ 20-30 ವರ್ಷಗಳಿಂದ ಉತ್ತು ಬಿತ್ತು ಜಪ್ತಾನು ಮಾಡಿಕೊಂಡು ಬಂದಿದ್ದಾರೆ. ಅಂಥ ವರಿಂದ ಜಪ್ತಾನು ಕಸಿದುಕೊಳ್ಳಬೇಡಿ ಎಂದು ಜನರಲ್ ರೆಪ್ರಸೆಂಟೇಷನ್ ಇದೆ. ಹಾಗೆ ಮಾಡಿದರೆ, ಈಗ ಸೋಸಿಯಲ್ ಚೇಂಜಸ್ ಆಗುತ್ತಿರುವಾಗ ಕ್ಲಾಸ್ ಕಾಂಪ್ಲಿಕ್ ತೀಕ್ಷ್ಣವಾಗುತ್ತದೆ ಈಗ ಜೋಳದ ಕಾಸ್ಟ್ ಆಫ್ ಪ್ರೊಡಕ್ಷನ್ ರೇಟ್ 120 ರೂಪಾಯಿ ಆಗಿದೆ. 105 ರೂಪಾಯಿ ಆಗಿದೆ. ಕ್ವಿಂಟಾಲಿಗೆ 90 ರೂಪಾಯಿಗೆ ವಾರಾಟ ಮಾಡಿಕೊಳ್ಳುತ್ತಿದ್ದಾರೆ. ಅವರಿಗೆ ಕಾಸ್ಟ್ ಆಫ್ ಪ್ರೊಡಕ್ಷನ್‌ಗೆ ತಕ್ಕಂಥ ರೇಟ್ ಸಿಗುತ್ತಿಲ್ಲ.

ಅಧ್ಯಕ್ಷರು.—ಅಪ್ರೋಪ್ರಿಯೇಷನ್ ಬಿಲ್ಲಿನಲ್ಲಿ ಏನು ವಿಷಯ ಇದೆ ಆ ಬಗ್ಗೆ ಮಾತನಾಡಬೇಕು. ಅದನ್ನು ಬಿಟ್ಟು ಬೇರೆ ವಿಷಯವನ್ನು ಮಾತನಾಡಿದರೆ ಏನು ಪ್ರಯೋಜನ ?

ಶ್ರೀ ವಿ. ಎನ್. ಪಾಟೀಲ್.—ಸಮಾಜ ಕಲ್ಯಾಣಕ್ಕಾಗಿ ಎಷ್ಟೆಷ್ಟು ಹಣ ಖರ್ಚಾಗುತ್ತಿದೆ ಎಂಬುದರ ಬಗ್ಗೆ ಕೆಲವು ವಿಷಯಗಳನ್ನು ಮಾನ್ಯ ಸಚಿವರ ಗಮನಕ್ಕೆ ತಂದಿದ್ದಾರೆ. ಈ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ. ಇಂದು ಆಹಾರ ಧಾನ್ಯಗಳ ಬೆಲೆ ಕೆಳಮಟ್ಟಕ್ಕೆ ಇಳಿಯುತ್ತಿದೆ. ಇದರಿಂದ ಎಲ್ಲ ಜನರು ಸಾಲಸೋಲ ಮಾಡುತ್ತಿದ್ದಾರೆ. ಉದಾಹರಣೆಗೆ ಒಂದು ಕ್ವಿಂಟಾಲ್ ತೊಗರಿಗೆ 90 ರೂಪಾಯಿನಂತೆ ವಾರಾಟಮಾಡುತ್ತಿದ್ದಾರೆ, ಹೀಗಾಗಿ ರೈತನಿಗೆ ಕಾಸ್ಟ್ ಆಫ್ ಪ್ರೊಡಕ್ಷನ್ ಸಿಗುತ್ತಿಲ್ಲ. ಇಂಥ ಸಂದರ್ಭದಲ್ಲಿ ರೈತನಿಗೆ ಕೊಡತಕ್ಕ ಇನ್‌ಪುಟ್ಸ್ ಏನು ಇದೆ, ಕನ್ಸ್ಯೂಮರ್ ಗೂಡ್ಸ್ ಏನು ಇದೆ ಅದಕ್ಕೆ ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ ಮಾಡಿ. ಆ ರೀತಿ ಮಾಡಿ ಸೋಷಿಯರ್ ಟ್ರಾನ್ಸ್‌ಫರ್ಮೇಷನ್ ತರಬೇಕು, ಇಲ್ಲದಿದ್ದರೆ ರೈತರು ಸರ್ಕಾರದ ಬಗ್ಗೆ ವಿರೋಧವಾಗುತ್ತಾರೆ. ಸರ್ಕಾರದ ಮೇರೆ ಪ್ರಜೆಗಳು ಬೀಳುವುದಕ್ಕೆ ಅವಕಾಶ ಕೊಡಬೇಡಿ. ರೈತನಿಗೆ ಪಂಪ್‌ಸೆಟ್ಟುಗಳನ್ನು ಕೊಳ್ಳುವುದಕ್ಕೆ ಹಣವನ್ನು ಕೊಡಬೇಕು. ಹಳ್ಳಿ ರೈತನಿಗೆ ಇನ್‌ಪುಟ್ಸ್ ಏನು ಬೇಕು ಎಷ್ಟು ಬೇಕೆಂದು ನೋಡಿ ಅವುಗಳನ್ನು ಶೇಕಡ 25ರಷ್ಟು ಸಬ್ಸಿಡಿ ರೇಟ್‌ನಲ್ಲಿ ಕೊಡುವಂತೆ ಏರ್ಪಾಡು ಮಾಡಬೇಕು. ಈ ರೀತಿ ಆಲ್ಟರ್‌ನೇಟೀವ್ ಅರೇಂಜ್‌ಮೆಂಟ್ ಮಾಡಿದರೆ ರೈತರಿಗೆ ತೊಂದರೆಯಾಗುವುದಿಲ್ಲ. ವರ್ಕಿಂಗ್ ಕ್ಲಾಸನ್ನಿಗೂ ಕೂಡ ಫುಡ್ ಗ್ರೈನ್ಸ್ ಚೀಪರ್ ರೇಟಿನಲ್ಲಿ ಸಿಗಬೇಕು. ಹಳ್ಳಿಯ ರೈತರಿಗೆ ಯಾವ ಬೆನಿಫಿಟ್ಸ್ ಸಿಗದೆ ಇದ್ದುದಕ್ಕೆ ಅವರ ಎಕ್ಸ್‌ಪ್ಲಾಯಿಟೇಶನ್ ಆಗಿ ಲ್ಯಾಂಡ್‌ಲೆಸ್ ಪುತ್ತು ಮಾರ್ಜಿನಲ್ ಫಾರ್ಮರ ಮೇಲೆ ಹೆಚ್ಚು ಬಾರ ಬೀಳುತ್ತದೆ. ಅವನಿಗೆ ಯಾವ ತರಹದ ಆಲ್ಟರ್‌ನೇಟೀವ್ ಲೋನ್ ಫೆಸಿಲಿಟೀಸ್ ಕೊಡಬೇಕೆಂದು ಪಾಡುತ್ತಿದ್ದಾರೋ ಅದು ಇನ್ನೂ ಸಿಗುತ್ತಾ ಇಲ್ಲ. ಈ ರೀತಿ ಒಂದು ಅನಿಶ್ಚಿತ ವಾತಾವರಣ ಇದೆ. ಅದನ್ನು ದೂರ ಮಾಡಿ ಅವನಲ್ಲರುವ ಕನ್‌ಫ್ಯೂಶನ್ ಅನ್ನು ದೂರ ಮಾಡಿ Plans are for him ಎಂಬ ಫೀಲಿಂಗ್ ಅವನಲ್ಲಿ ಬರಬೇಕು. ಆ ಫೀಲಿಂಗ್ ಬರುತ್ತಾ ಇಲ್ಲ. If you do not safeguard his interest he is bound to develop an antagoristic feeling against the Goverrment in the present change and transformation. ಕೊನೆಯದಾಗಿ, ಕೇತ ಮಜದೂರರ ಬಗ್ಗೆ ಮಿನಿಮಮ್ ವೇಜಸ್ ಏನು ಕೊಟ್ಟಿದ್ದಾರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ರೆವಿನ್ಯೂ ಇನ್‌ಸ್ಪೆಕ್ಟರನ್ನು ಅಪಾಯಿಂಟ್ ಮಾಡಿದ್ದಾರೆ. Revenue Inspector is already over burdened with collection of arrears and several other duties. 10-20 ರೆವಿನ್ಯೂ ಇನ್‌ಸ್ಪೆಕ್ಟರುಗಳು ಇರುವಂತಹ ಒಂದೊಂದು ತಾಲ್ಲೂಕಿನಲ್ಲಿ 25000 ಕೇತ ಮಜದೂರರ ಕೇಸುಗಳು ಇರುತ್ತದೆ. ಅವರಿಗೆ ಬಹಳ ಅನ್ಯಾಯವಾಗುತ್ತಿದೆ, ಅವರಿಗೆ ಸ್ಯಾಲರಿ ಸರಿಯಾಗಿ ಸಿಗುತ್ತಿಲ್ಲ. ಈಗ ಬಾಂಡೆಡ್ ಲೇಬರ್ ಬಗ್ಗೆ ರಾಂಗ್ ಇಂಟರ್‌ಪ್ರಿಟೇಶನ್ ಮಾಡಿ ಅನ್ಯಾಯವಾಗುತ್ತಿದೆ. ರೆವಿನ್ಯೂ ಇನ್‌ಸ್ಪೆಕ್ಟರಿಗೆ ಕೆಲಸ ಓವರ್ ಬರ್ಡನ್ ಆಗಿದೆ. ಅಡಿಷನಲ್ ರೆವಿನ್ಯೂ ಇನ್‌ಸ್ಪೆಕ್ಟರ್ ಮತ್ತು ಅಡಿಷನಲ್ ಮಷೀನರಿ ನೇಮಕ ಮಾಡದಿದ್ದರೆ ಕೃಷಿ ಕಾರ್ಮಿಕನಿಗೆ ನ್ಯಾಯ ದೊರಕುವುದಕ್ಕೆ ಸಾಧ್ಯವಿಲ್ಲ. ಸ್ಟ್ಯಾಟ್ಯೂಟ್ ಬುಕ್‌ನಲ್ಲಿ ಸಾಕಷ್ಟು ಸೌಲಭ್ಯ ಕೊಟ್ಟಂತಾಗುತ್ತದೆ ಮತ್ತು ಇಂಪ್ಲಿಮೆಂಟೇಶನ್ನಿಗೆ ಸಾಧ್ಯವಿಲ್ಲದಂತಾಗು

ತ್ತದೆ. ಇಂಪ್ಲಿಮೆಂಟೇಶನ್ ಆಗಲಿಲ್ಲವೆಂದರೆ ಇಂಪ್ಲಿಮೆಂಟೇಶನ್ ಮಾಡುವ ಮನಸ್ಸಿಲ್ಲದೆ ಕಾಯಿದೆ ಪಾಸ್ ಮಾಡಿದ್ದಾರೆಂಬ ಆರೋಪ ಬರುತ್ತದೆ. ಆ ರೀತಿ ಆಗಲು ಅವಕಾಶ ಕೊಡಬೇಡಿ ಎಂದು ಕೇಳಿಕೊಂಡು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† SRI M. Y. GHORPADE.—The general convention is that on the Appropriation Bill, there is not much of debate for the simple reason that everything that is worth saying is excepted to be said not only during the general discussion on the budget but also on the detailed discussions on the demands of the Departments. I think the speech of the Hon. Member which is just concluded is a good example of how these things are more effectively stated and more effectively answered if they are raised during the demand of the concerned Department. Though I am tempted to answer some of the points raised. I need not go in detail on each and every point raised on this occassion. I shall therefore, reply in a general way and in so doing I will say that we shall keep in mind whatever Sri T. R. Shamanna has stated regarding proper utilisation of funds, and this will always be our endeavour. During the budget discussion it was repeatedly pointed out that the taxation per capita in Karnataka is quite high when compared with other States. The per capita taxation in relation to the per capita income is fairly high. The per capita expenditure in Karnataka is as high as Rs.70. Our population has increased to 3 crores. If we take both plan and non-plan developmental expenditure, the total per capita development expenditure in Karnataka is as high as 131. during 1976-77. The development expenditure both plan and non-plan comes to Rs. 70 during 1976-77. This is because of the tempo of development we have been able to achieve in Karnataka. These figures compare most favourably with any other State in the Country. I can claim with certain amount of justificatien that the resource mobilisation has been quite impressive as I pointed out in my budget speech, and we have done Rs. 226 crores. However, every care has been taken to see that this burden of resource mobilisation falls on those sections of Society who can afford to bear the burden. We have taken care to see that this burden does not fall in a disproportionate manner on the poorer sections of the Society. We could raise this amount of resources in a more fair and equitable manner without affecting the production and without burdening the poor much. The poorer sections may not feel the pinch of it and we are aware of this fact. Though the poor people are not exports in economies, they sometimes have more commensense than many trained economists. The poorer sections are conscious of the fact what the Government has done is fair and just. Unless the Government put tax on those who can afford to pay the lot of the poor cannot be improved. Actually taxation is an element of income distribution for alronnd development

of the country. The Government will keep in mind the theory of reducing the inequality among the sections of the Society. With this objective in view the Government would impose tax.

11-00 A.M

And we have tried to keep this in mind and implement in our taxation proposalsto the best of our ability. I for one taken a particular care to see that this burden is distributed equally to those who can afford to pay and bear the burden. That is the main reason why people of Karnataka instead of rejecting resource mobilisation efforts of the Government, by and large welcomed it as a progressive step which will build the strength of the Karnataka. No Government can and should continue in power if it is not prepared to use the mandate given by the people, withont of course, harming the interest of the people. I don't see any fair system of taxation harms anybody's interest. Ultimately, everybody's interest is safeguarded if we take care of the poor sections of the society. The interest of the richer elements of the society is also ultimately safeguarded as they also benefit from climate of socio-economic satisfaction that is generated in the country. rich people cannot become richer if the climate of the society is not satisfactory. Therefore, in the self interest of the rich the enlightened people's view for the resource mobilisation in Karnataka is also favourable. It is universally acclaimed all over the country and theytake a positive view of this and support it because it was in the interest of theirs also the Government take certain steps. Whatever interest of the Karnataka people,-in the interest of the society in general, whether rich or poor, or whatever caste or creed they belong-the Government have taken such measures for the benefit of all sections of the society. I would like to take this opportunity of informing the people through this House that the Bills which I have just now introduced are by virtue of provisional collection arrangements. All these Bills except the Professional Tax Bill will come into force from first April. Hon. Members know that as soon as the Bill is introduced we are entitled to start collection. However, to give time to everybody to adjust to the new rates we are issuing instructions. All these taxes including sales tax, entertainment tax, stamp duty enhancement etc., will come into force from first April. Professional tax, however, come into force after the Bill is passed in the House. The reason for the distinction is those taxes were retrospective in nature. Suppose if we wait till the Bills are actually passed there are some difficulites to collect retrospectively. Therefore, these taxes will come into force with effect from first April. And therefore, we use the provision of Tax to start collecting.

However, in the case of professional tax that difficulty does not arise. Therefore we can conventently wait to pass this Bill in the House before it comes into force. In other words, all taxes except professional tax will come into force from first April of this year. I once again take this opportunity to thank all the Members who have participated and co-operated for the passing of this measure.

SRI T.R. SHAMANNA.—Will you make available the copies of the Bills for the public?

SRI M.Y. GHORPADE.—Copies will be made available. I thank the Members belonging to all the parties for their understanding not only this year, but also in the last four years which understanding has helped the Government. in a very big way all sorts of progress we have made.

MADAM SPEAKER.—I will put the consideration motion to the vote of the House. The question is:

"That the Karnataka Appropriation (No.3) Bill, 1976 be taken into consideration".

The motion was adopted.

CLAUSES 2, 3 and the schedule

MADAM SPEAKER.—I will put the clauses to the vote of the House. The question is:

"That Clause 2, 3, and the schedule do stand part of the Bill."

The motion was adopted

Clauses 2, 3, and the schedule was added to the Bill.

CLAUSE 1 ETC.

MADAM SPEAKER.—The question is:

"That clause 1 the long Title, the Preamble and the Enacting formula do stand part of the Bill."

The motion was adopted.

Clause, the long Title, the Preamble and the Enacting formula were added to the Bill.

MOTION TO PASS

SRI M.Y. GHORPADE.—I beg to move:

"That the Karnataka Appropriation (No.3) Bill 1976 be passed."

MADAM SPEAKER.—The question is:

"That the Karnataka Appropriation (No 3) Bill 1976 be passed."

The motion was adopted and the Bill was passed.

ಅಧ್ಯಕ್ಷರು.—ಇಂದಿಗೆ ಈ ವರ್ಷದ ಬಡ್ಜೆಟ್ ಅಧಿವೇಶನ ಮುಗಿಯುತ್ತದೆ. ಇದನ್ನು ಸುಗಮವಾಗಿ ನಡೆಸಿಕೊಟ್ಟ ಸರ್ಕಾರ ಹಾಗೂ ಈ ಸಭೆಯ ಎಲ್ಲಾ ಮಾನ್ಯ ಸದಸ್ಯರಿಗೂ ನನ್ನ ಅಭಿನಂದನೆಗಳನ್ನು ಮತ್ತು ಪಂದನೆಗಳನ್ನು ಅರ್ಪಿಸುವುದಕ್ಕೆ ನಾನು ಇಷ್ಟಪಡುತ್ತೇನೆ. ತಮ್ಮ ಜೀವನದಲ್ಲಿ ಮುಂದೆ ಬರಬಹುದಾದ ಎಲ್ಲಾ ಸಂದರ್ಭಗಳೂ, ಸಂಭವಗಳೂ ಹಾಗೂ ಬೇಪಿನಂತೆ ಕಹಿಯಾಗಿ ಬರುವಂತಹ ಸಂದರ್ಭಗಳು ಮತ್ತು ಸಂಭವಗಳೂ ಬೆಲ್ಲದಂತೆ ಸಿಹಿಯಾಗಿ ಪರಿವರ್ತನೆಗೊಂಡು ಮುಂದೆ ಬರತಕ್ಕ ನಳ ಸಂವತ್ಸರವು ಎಲ್ಲರಿಗೂ ಸುಖಸಂತೋಷಗಳನ್ನೂ ತರಲಿ ಎಂದು ಹಾರೈಸಿ ಈ ಸಭೆಯನ್ನು ಮುಂದೂಡುತ್ತೇನೆ ಮತ್ತೆ ಈ ಸಭೆಯು ಮುಂದಿನ ತಿಂಗಳು ಅಂದರೆ ಏಪ್ರಿಲ್ 7ನೇ ತಾರೀಖು ಬುಧವಾರ ಒಂದು ಗಂಟೆಗೆ ಸಮಾವೇಶಗೊಳ್ಳುತ್ತದೆ.

The House adjourned at Ten Minutes past Eleven of the clock to meet again at One of the clock on Wednesday the 7th April 1976